ಕೆಲಸವಾಗುತ್ತಿದೆ. ಬೇರೆ ಖರ್ಚುಗಳಿಗೆ 6 ಕೋಟಿ ಖರ್ಚುಮಾಡಿ ಒಟ್ಟು ಇದುವರೆಗೆ 12 ಕೋಟಿ ರೂಪಾಯಿಗಳನ್ನು ಎಪಿಎಂಸಿ ಅಭಿವೃದ್ಧಿಗಾಗಿ ಖರ್ಚು ಮಾಡಲಾಗಿದೆ.

ಶ್ರೀ ಕುಂಬ್ಳೆ ಸುಂದರರಾವ್:- ಇದು ಯಾವಾಗ ಪೂರ್ಣವಾಗಿ ಜನರಿಗೆ ಯಾವಾಗ ಉಪಯೋಗ ಸಿಗುತ್ತದೆ ಎಂದು ಹೇಳಬಹುದಾ?

ಶ್ರೀ ಹೆಚ್.ನಾಗಪ್ಪ:- ಸ್ವಲ್ಪ ಡಿಲೆ ಆಯಿತು. ಏಕೆಂದರೆ, ಹಿಂದೆ ಬಂಗಾರಪ್ಪನವರ ಕಾಲದಲ್ಲಿ ಒಂದು ಸಮಿತಿ ನೇಮಕವಾಯಿತು, ಮೊಯಿಲಿಯವರು ಬಂದು ಇನ್ನೊಂದು ಸಮಿತಿ ನೇಮಿಸಿದ ಮೇಲೆ ಹಿಂದಿನ ಸಮಿತಿಯವರು ಹೈಕೋರ್ಟಿನಿಂದ ಸ್ಟೆ ತಂದಿದ್ದರಿಂದ ಈ ಕೆಲಸ ತಡವಾಯಿತು. ಈ ಕೆಲಸವನ್ನು ಡಿಸೆಂಬರ್ 96ರ ಹೊತ್ತಿಗೆ ಮುಗಿಸಿಕೊಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ಸರ್ಕಾರದ ಹಣ ಸರ್ಕಾರದ ಕೆಲಸ ಇದರ ಬಗ್ಗೆ ಪವಿತ್ರ ಲಕ್ಷ್ಯ ದೃಷ್ಟಿ ಇರಬೇಕಲ್ಲ, 96 ಡಿಸೆಂಬರ್ ವೇಳೆಗೆ ನೀವು ಮುಗಿಸಿಕೊಡುತ್ತೀರಿ ಎಂದರೆ ನಾನು ನಂಬುತ್ತೇನೆ. ನಾನು ಆಶಾವಾದಿಯಾಗುತ್ತೇನೆ, ನಾನು ಬಹಳ ದೊಡ್ಡ ಲಾಭದಲ್ಲಿದ್ದೇನೆ, ಏಕೆಂದರೆ ಅಂತಹ ಕಟ್ಟಡವೇ ಇಲ್ಲವೆಂದು ಹೇಳಿದ್ದರಿಂದ ಯಕ್ಷಗಾನ ಬಯಲಾಟಕ್ಕೆ ಒಳ್ಳೆಯ ಜಾಗ ಸಿಕ್ಕಿತು ಅಂದುಕೊಂಡಿದ್ದೆ.

ಅಧ್ಯಕ್ಷರು:- ಕೆಲಸವನ್ನು ಡಿಸೆಂಬರ್ 96ಕ್ಕೆ ಮುಗಿಸಿ ತಮ್ಮನ್ನು ಕರೆದುಕೊಂಡು ಹೋಗಿ ಕಾರ್ಯಕ್ರಮ ಏರ್ಪಾಟು ಮಾಡುತ್ತಾರೆ. ನಂಜೇಗೌಡರೇ ನಿಮ್ಮ ಮುಂದಿನ ಪ್ರಶ್ನೆಗೆ ಸರ್ಕಾರ ಸ್ವಲ್ಪ ಸಮಯ ಕೇಳಿದೆ, ದಯಮಾಡಿ ಸಹಕರಿಸಿ.

ವಿಷಯ:- ಬೆಂಗಳೂರಿನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 155 (948)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಎ) ಪಶುವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಇದೆಯೇ?

ಬಿ) ಹಾಗಿದ್ದಲ್ಲಿ ಐಸಿಎಆರ್ ಅನುಮತಿ ನೀಡಿದೆಯೇ?

ಸಿ) ಇಲ್ಲದಿದ್ದಲ್ಲಿ ಅನುಮತಿ ಪಡೆಯಲು ಯಾವ ಕ್ರಮ ಕೈಗೊಂಡಿದೆ?

ಡಿ) ಪ್ರಸ್ತಾಪಿಸಿರುವ ವಿಶ್ವವಿದ್ಯಾನಿಲಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಎ) ಇಲ್ಲ.

ಬಿ) ಉದ್ಭವಿಸುವುದಿಲ್ಲ.

ಸಿ) ಉದ್ಭವಿಸುವುದಿಲ್ಲ.

ಡಿ) ಉದ್ಭವಿಸುವುದಿಲ್ಲ.

ಶ್ರೀ ಎನ್.ರಾಜಣ್ಣ:- ವೆಟರ್ನರಿ ವಿಶ್ವವಿದ್ಯಾಲಯವನ್ನು ಶುರುಮಾಡುತ್ತೇವೆ ಎಂದು ಹಿಂದೆ ಪತ್ರಿಕೆಗಳಲ್ಲಿ ಹೇಳಿದ್ದಿರಿ. ಯೂನಿವರ್ಸಿಟಿ ಶುರುಮಾಡಲು ಮುಂದೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರೋ?

ಶ್ರೀ ಸಿ.ಬೈರೇಗೌಡ:- ಪಶುವೈದ್ಯ ವಿಶ್ವವಿದ್ಯಾಲಯ ತೆರೆಯುತ್ತೇವೆಂದು ನಾನಂತೂ ಹೇಳಿಲ್ಲ. ಇದನ್ನು ತೆರೆಯಬೇಕಾದ ಅವಶ್ಯಕತೆ ಇದೆಯೇ ಎಂಬುದೂ ಸಹ ಪರಿಶೀಲನೆಯಲ್ಲಿಲ್ಲ ನನ್ನ ಅಭಿಪ್ರಾಯದಂತೆ ಸಧ್ಯಕ್ಕಂತೂ ಇದರ ಅವಶ್ಯಕತೆ ಇಲ್ಲ.

ಶ್ರೀ ಎನ್.ರಾಜಣ್ಣ:- ನಮ್ಮ ಕೃಷಿ ಸಚಿವರು ಬಹಳ ಅನುಭವಸ್ಥರು. ದೇಶದಲ್ಲಿ ಇವತು 200 ಮಿಲಿಯನ್ ಟನ್ ಫುಡ್‌ಗ್ರೈನ್ಸ್ ಬೆಳೆಯುತ್ತೇವೆ. ಇಷ್ಟು ಬೆಳೆದರೂ ಆರೋಗ್ಯದಮಟ್ಟ ಕಡಿಮೆ ಇದೆ. ಅದಕ್ಕಾಗಿ ವೆಟರ್ನರಿ ವಿಶ್ವವಿದ್ಯಾಲಯ ಆರೋಗ್ಯವಾಗಿರಬೇಕೆಂಬುದು ನನ್ನ ಹಿನ್ನೆಲೆ.

ಶ್ರೀ ಸಿ.ಬೈರೇಗೌಡ:- ವಿಶ್ವವಿದ್ಯಾಲಯ ಆದ ತಕ್ಷಣ ಆರೋಗ್ಯ ಸುಧಾರಣೆ ಆಗುತ್ತದೆಂಬ ನಂಬಿಕೆ ನನ್ನದಲ್ಲ. ವೈದ್ಯಕೀಯ ವಿಶ್ವವಿದ್ಯಾಲಯವನ್ನು ಈ ವರ್ಷ ನಾವು ಸ್ಥಾಪಿಸಿದ್ದೇವೆ. ಆದ್ದರಿಂದ ರಾಜ್ಯದ ಎಲ್ಲರ ಆರೋಗ್ಯ ಸುಧಾರಣೆ ಆಗುತ್ತದೆಂಬ ತರ್ಕ ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ಸಧ್ಯದಲ್ಲಿ ಅದರ ಅವಶ್ಯಕತೆ ಕಂಡುಬರದ ಕಾರಣದಿಂದ ಇದು ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

10.20 ಎ.ಎಂ.

ಶ್ರೀ ಎನ್.ರಾಜಣ್ಣ:- ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕರ್ನಾಟಕದಲ್ಲಿ ಆಗಲೀ ದೇಶದಲ್ಲಾಗಲೀ ವೆಟರ್‌ನರಿ ಸೈನ್ಸ್ ಬಹಳ ಮುಖ್ಯವಾದದ್ದು. ಎಲ್ಲದಕ್ಕೂ ನಮಗೆ ಹಸು, ದನ ಕುರಿ, ಕೋಳಿ, ಮೇಕೆ, ಕಾಡು ಪ್ರಾಣಿಗಳು ಬೇಕು, ಪಕ್ಷಿಗಳು ಬೇಕು ಆದರೆ ನಮ್ಮ ಆರೋಗ್ಯ ಕಾಪಾಡಬೇಕಾದರೆ ಅರಣ್ಯ ಸಂಪತ್ತು, ಪ್ರಾಣಿ ಸಂಪತ್ತು ಪಕ್ಷಿ ಸಂಪತ್ತು ಇವೆಲ್ಲ ಮುಖ್ಯ. ಅದು ಸುಭಿಕ್ಷವಾಗಿದ್ದರೆ ಮಾತ್ರ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ. ನಿನ್ನೆ ಅರಣ್ಯ ಸಚಿವರು ನಮ್ಮಲ್ಲಿ ಅರಣ್ಯ ಕಡಿಮೆಯಾಗಿದೆ ಎಂದು ಹೇಳುತ್ತಿದ್ದರು. ಈ ವೆಟರ್‌ನರಿ ಯೂನಿವರ್ಸಿಟಿಯನ್ನು ಆದಷ್ಟು ಬೇಗ ಶುರು ಮಾಡಿದರೆ ಕರ್ನಾಟಕದ ಜನರಿಗೆ ಒಳ್ಳೆಯದಾಗುತ್ತದೆ. ಪ್ರಾಣಿ ಸಂಪತ್ತು ಆರೋಗ್ಯದಿಂದ ಇರುತ್ತದೆಂದು ನಾನು ಒತ್ತಿ ಹೇಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ:- ಪ್ರಾಣಿಗಳ ಆರೋಗ್ಯ ಕಾಪಾಡಬೇಕಾಗಿರುವುದು ಅತಿ ಅವಶ್ಯಕ. ಅದಕ್ಕೆ ತಕ್ಕಂತಹ ವ್ಯವಸ್ಥೆ ಇದೆ. ನಮ್ಮ ರಾಜ್ಯದಲ್ಲಿ ಈಗ ಎರಡು ಕಾಲೇಜುಗಳು

ಇವೆ. ಅಲ್ಲಿ ಬರತಕ್ಕಂತಹ ವೈದ್ಯರು ಏನು ಇದ್ದಾರೆ ಅವರು ನಮ್ಮ ರಾಜ್ಯದ ಪ್ರಾಣಿಗಳಿಗೆ ತಕ್ಕಂತೆ ಸಾಕಷ್ಟು ಇದ್ದಾರೆ.

ಅದರ ಆರೋಗ್ಯದ ಕಡೆಗೆ ಗಮನ ಕೊಡಬೇಕು ಎನ್ನುವುದರಲ್ಲಿ ಅರ್ಥ ಇದೆ ನಾನು ಒಪ್ಪಿಕೊಳ್ಳುತ್ತೇನೆ. ಆ ರೀತಿಯಾದ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಆದರೆ ವಿಶ್ವವಿದ್ಯಾನಿಲಯ ತೆಗೆಯಬೇಕು ಎಂದರೆ ಐ.ಸಿ.ಆರ್.ನವರು ಒಪ್ಪಬೇಕಾಗುತ್ತದೆ ಮತ್ತು ಬೇರೆ ಬೇರೆಯ ಹಣದ ವ್ಯವಸ್ಥೆ ಕೂಡ ಮಾಡಬೇಕಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಸರಕಾರದ ಹಣಕಾಸಿನ ಪರಿಸ್ಥಿತಿ ಆ ಮಟ್ಟದಲ್ಲಿ ಇಲ್ಲದೇ ಇರುವ ಕಾರಣದಿಂದ ಅದು ಪರಿಶೀಲನೆಯಲ್ಲಿ ಇಲ್ಲ.

ಶ್ರೀ ಎನ್.ರಾಜಣ್ಣ:- ಈಗ ನಮ್ಮ ಪ್ರಧಾನಮಂತ್ರಿಗಳೇ ಇದ್ದಾರೆ. ಇದೇ ವೇಳೆಯಲ್ಲಿ ಆದಷ್ಟು ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್‌ನಿಂದ ಅನುಮತಿ ತೆಗೆದುಕೊಂಡರೆ ಮುಂದೆ ಶುರು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ನಾವೆಲ್ಲರೂ ಕಲೆತು ಅವರನ್ನು ಕನ್ವಿನ್ಸ್ ಮಾಡಿ ಒಂದು ಡೆಲಿಗೇಷನ್ ಮೂಲಕ ಪಿ.ಎಂ. ಹತ್ತಿರ ಹೋಗಿ ಇದರ ಬಗ್ಗೆ ವಿಚಾರ ಮಾಡೋಣ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ ತಮ್ಮ 114ನೇ ಪ್ರಶ್ನೆಗೆ ಸರಕಾರದವರು ಸಮಯ ಕೇಳಿದ್ದಾರೆ ತಾವು ದಯವಿಟ್ಟು ಸಹಕರಿಸಬೇಕು.

ವಿಷಯ:- ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ರಸ್ತೆಗಳ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 157 (693)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 1995-96ನೇ ಸಾಲಿನಿಂದ ಇದುವರೆವಿಗೂ ಹಾಸನ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವತಿಯಿಂದ ನಿರ್ಮಿಸಿರುವ ರಸ್ತೆಗಳ ಸಂಖ್ಯೆ ಎಷ್ಟು?

2) ಅರಕಲಗೂಡು ತಾಲ್ಲೂಕ್‌ನಲ್ಲಿ ಎಷ್ಟು ರಸ್ತೆಗಳನ್ನು ನಿರ್ಮಿಸಲಾಗಿದೆ?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

1) ಇಲ್ಲ.

2) ಇಲ್ಲ.

ಶ್ರೀ ಎ.ಟಿ.ರಾಮಸ್ವಾಮಿ:- ಕಳೆದ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಪ್ರತಿ ಶಾಸನ ಸಭಾ ಕ್ಷೇತ್ರದಿಂದ 15 ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಂಡರು. ಅಂದಾಜು ಕೂಡ ಮಾಡಿಸಿದ್ದರು. ಆದರೆ ಕೆಲಸ ಮಾಡಲಿಲ್ಲ ಇದಕ್ಕೆ